# ಜಿನುಗುವ ಹನಿಗೆ ಜೇನ್ನೊಣಗಳ ಮುತ್ತಿಗೆ

ಬೇಸಿಗೆ ಬಂತೆಂದರೆ ಬಹುತೇಕ ಎಲ್ಲ ಜೀವಿಗಳಿಗೆ ನೀರಿನ ಕೊರತೆ ಉಂಟಾಗುತ್ತದೆ. ಇದನ್ನು ಮನಗಂಡು ಪಕ್ಷಿಗಳ ದಾಹ ನೀಗಿಸಲು ಹಲವರು ತಮ್ಮ ಮನೆಯ ಮಹಡಿ, ಗಿಡಮರಗಳ ಕೊಂಬೆಗಳಿಗೆ ನೀರಿನ ಬಟ್ಟಲುಗಳನ್ನು ಕಟ್ಟಿ ಪಕ್ಷಿಗಳ ದಾಹ ನೀಗಿಸಿದರೆ ಇನ್ನೂ ಕೆಲವರು ಕಾಡಿನಲ್ಲಿ ಸಣ್ಣ ಹೊಂಡಗಳನ್ನು ತೋಡಿ ನೀರು ತುಂಬಿಸಿ ಕಾಡುಪ್ರಾಣಿಗಳ ದಾಹ ತೀರಿಸುತ್ತಾರೆ. ಆದರೆ ಎಲ್ಲ ಜೀವಿಗಳೂ ಒಂದೇ ವಿಧಾನದಲ್ಲಿ ನೀರು ಕುಡಿಯಲು ಸಾಧ್ಯವಿಲ್ಲ. ಜೇನ್ನೊಣಗಳ ಕಥೆಯೇ ಇದಕ್ಕೆ ತಾಜಾ ಉದಾಹರಣೆ. ಇವುಗಳಿಗೆ ತೊಟ್ಟಿಯಲ್ಲಿರುವ ನೀರನ್ನು ಹೀರುವುದು ಕಷ್ಟಸಾಧ್ಯ , ಅನಿವಾರ್ಯವಾಗಿ ಪ್ರಯತ್ನಿಸಿದರೆ ಸಾವೆಂಬ ಉಡುಗೊರೆ ಖಚಿತ! ಅದಕ್ಕೆಂದೇ ನೀರಿನ ಪಸೆ– ಕೆಸರು, ತೊಟ್ಟಿಗಳಿಂದ ನೀರು ಜಿನುಗುವ ಪಾಚಿಯಲ್ಲಿಯ ತೇವವನ್ನು ಹೀರುತ್ತವೆ. ಮಕರಂದಪ್ರಿಯರ ದಂಡು ನೀರಿನ ಕೋಟೆಗೆ ಮುತ್ತಿಗೆ ಹಾಕಿರುವಂತೆ ಕಾಣುತ್ತಿವೆ.

—ಮಹೇಶ್ವರ ಹುರುಕಡ್ಲಿ, ಬಾಚಿಗೊಂಡನಹಳ್ಳಿ






# ಪಂಚಲೋಹದ ಬೃಹತ್ ತೋಪು

ಮಾಲಿಕ್‌ಎಮೈದಾನ್ ಎನ್ನುವ ಹೆಸರಿನ ಈ ಬೃಹತ್ ಫಿರಂಗಿಯು ವಿಜಯಪುರ ಜಿಲ್ಲಾ ಕೇಂದ್ರದಲ್ಲಿದೆ. ಅದನ್ನು ಶೇರ್ ಎಬುರ್ಜ್ ಎಂದು ಕರೆಯುವ ಮೆಟ್ಟಿಲುಗಳ ಮೇಲಂತಸ್ತಿನ (ಸಿಂಹ ಗೋಪುರ) ವೇದಿಕೆಯಲ್ಲಿಡಲಾಗಿದೆ. 1549ರಲ್ಲಿ ಅಹ್ಮದ್ ನಗರದಲ್ಲಿ ಎರಕಹೊಯ್ದು ಈ ಫಿರಂಗಿಯನ್ನು ಟರ್ಕಿಯ ಮಾಲಿಕ್ ಹಸನ್ ತಯಾರಿಸಿದ್ದನಂತೆ. ಅಸಾಮಾನ್ಯ ಗಾತ್ರದ ಪಂಚಲೋಹ ನಿರ್ಮಿತ ಈ ಭಾರೀ ತೋಪು ಸುಮಾರು 5 ಅಡಿ ಹೊರ ವ್ಯಾಸ, 3 ಅಡಿ ಒಳವ್ಯಾಸ, ನಾಲ್ಕೂವರೆ ಮೀಟರ್ ಉದ್ದವಿದೆ ಮತ್ತು 55ಟನ್ ತೂಗುತ್ತದೆಯೆಂದು ಹೇಳಲಾಗುತ್ತದೆ. ಫಿರಂಗಿಯ ಹೊರಮೈ ಮೇಲೆ ಅರೇಬಿಕ್ ಮತ್ತು ಪರ್ಷಿಯನ್ ಭಾಷೆಗಳ ಕೆತ್ತನೆಗಳಿವೆ. ವಿಜಯಪುರದ ಸುಂದರ ಉದ್ಯಾನವನಗಳ ಜೊತೆ ರಾಷ್ಟ್ರೀಯ ಮಹತ್ವದ ಸ್ಮಾರಕಗಳಲ್ಲಿ ಇದೂ ಒಂದು.

—ರಮಣ್ ಶೆಟ್ಟಿ ರೆಂಜಾಳ್, ಮುಂಬಯಿ

# ಚಮಚ ಕೊಕ್ಕಿನ ಕೊಕ್ಕರೆ

ಚಮಚದಂತಿರುವ ಕೊಕ್ಕು ಇರುವುದರಿಂದ ಈ ಹೆಸರು ಬಂದಿದೆ. ಕೆರೆ, ಸಮುದ್ರಕ್ಕೆ ನದಿ ಸೇರುವ ಅಳಿವೆ, ಹೊಳೆಗಳಲ್ಲಿ ಈ ಪಕ್ಷಿ ಕಂಡು ಬರುತ್ತದೆ. ಈ ಕೊಕ್ಕರೆಗಳಲ್ಲಿ ಹಳದಿ ಬಣ್ಣದವು, ಗುಲಾಬಿ ಬಣ್ಣದವು ಮತ್ತು ಕಪ್ಪು ಕೊಕ್ಕಿನ ಚಮಚ ಕೊಕ್ಕರೆಗಳಿವೆ. ಇದನ್ನು ಯುರೇಶಿಯನ್ ಸ್ಪೂನ್ ಬಿಲ್ ಎಂದು ಕರೆಯುವರು. ಇವು ತ್ರೆಸ್ಕಿಯೊರ್ನಿತಿಡಿಯಾ ಕುಟುಂಬಕ್ಕೆ ಸೇರಿವೆ. ಬಿಳಿ ಬಣ್ಣದ ಗರಿ, ಉದ್ದದ ಬೂದುಗಪ್ಪು ಕಾಲು ಹಾಗೂ ಚಮಚದಾಕಾರದ ಕೊಕ್ಕಿನಿಂದ ಸುಲಭವಾಗಿ ಇವನ್ನು ಗುರುತಿಸಬಹುದು.

ನೀರಿನ ತಳವನ್ನು ಕೆದಕಿ, ಚುಂಚನ್ನು ಅರ್ಧ ತೆರೆದು ಅತ್ತಿತ್ತ ಅರ್ಧ ಚಂದ್ರಾಕಾರದಲ್ಲಿ ತಿರುಗಿಸಿ ಜಾಲಾಡಿ, ಅಲ್ಲಿರುವ ಸಣ್ಣ ಮೀನು, ಮೊಟ್ಟೆಗಳು, ಹುಳುಗಳನ್ನು ಭಕ್ಷಿಸುತ್ತದೆ. ಏಕ ಪತ್ನಿತ್ವ, ಪತಿತ್ವ ಅನುಸರಿಸುವ ಪಕ್ಷಿಯಿದು. ಬೆಳಿಗ್ಗೆ ಮತ್ತು ಸಂಜೆ ಆಹಾರವನ್ನು ತನ್ನ ಗೂಡಿನ ಸುಮಾರು 50 ಕಿ.ಮೀ. ವ್ಯಾಪ್ತಿಯಲ್ಲಿ ಹುಡುಕುತ್ತದೆ. ಇದು ಅಪರೂಪವಾಗಿ ಕಾಣ ಸಿಗುವ ಅಂದದ ಪಕ್ಷಿಯಾಗಿದೆ.

—ಪ್ರಕಾಶ ಎಸ್.ಮನ್ನಂಗಿ, ಮೋಟೆಬೆನ್ನೂರು.

